<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ</u>

<u>ಸಿ.ಸಿ. ಸಂಖ್ಯೆ: **787/2022**</u>

<u>ಪಿರ್ಯಾದಿ</u> : ರಾಜ್ಯ, ಪರವಾಗಿ ಆರ್.ಎಫ್.ಒ. ಮೂಡಿಗೆರೆ.

ವಿರುದ್ಧ

<u>ಆರೋಪಿತರು</u> : 1. ಶಿವಪ್ಪ, ವಯಸ್ಸು ಸುಮಾರು 42 ವರ್ಷ,
ಬಿನ್ ದಿಃ ಗೋವಿಂದಯ್ಯ,
ವಾಸಃ ಮೂಡಿಗೆರೆ ಗ್ರಾಮ, ಹಳೆ ಮೂಡಿಗೆರೆ,
ಮೂಡಿಗೆರೆ ತಾಲ್ಲೂಕು.

2. ಲೋಹಿತ್ ಅಲಿಯಾಸ್ ಶಂಕರ್ ಎಂ.ಎನ್.
ವಯಸ್ಸು ಸುಮಾರು 32 ವರ್ಷ,
ಬಿನ್ ನಾಗರಾಜು,
ವಾಸಃ ಶಾಂತಿನಗರ, ಹಳೆ ಮೂಡಿಗೆರೆ,
ಮೂಡಿಗೆರೆ ತಾಲ್ಲೂಕು.

<u>ದೋಷಾರೋಪಣೆ</u>

ಶ್ರೀ ವಿಶ್ವನಾಥ್.ಎ, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ಮೂಡಿಗೆರೆ, ಆದ ನಾನು, ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ-

ದಿನಾಂಕಃ 28.06.2022 ರಂದು ಮೂಡಿಗೆರೆ ನಗರ ಶಾಖೆ ಉಪ ವಲಯ ಅರಣ್ಯಾಧಿಕಾರಿ ಹಾಗೂ ಸಿಬ್ಬಂಧಿಗಳಿಗೆ ಬಂದ ಖಚಿತ ವರ್ತಮಾನದ ಮೇರೆಗೆ ಮೂಾಡಿಗೆರೆ ಗ್ರಾಮದ 1 ನೇ ಆರೋಪಿಯಾದ ನಿಮ್ಮ ಮನೆಯ ಹಿಂಭಾಗದ ಪ್ರದೇಶವನ್ನು ಪರಿಶೀಲಿಸಿದಾಗ ಆರೋಪಿತರುಗಳಾದ ನೀವುಗಳು ಯಂತ್ರದ ಸಹಾಯದಿಂದ 2 ಬೀಟೆಜಾತಿ ನಾಟಾಗಳು ಮತ್ತು 10 ಬೀಟೆಜಾತಿ ಸೈಜುಗಳನ್ನು ಅಪ್ರಮಾಣಿಕವಾಗಿ ಕಡಿತಲೆ ಮಾಡಿ ತುಂಡುಗಳನ್ನಾಗಿ ಪರಿವರ್ತಿಸಿರುವುದು ದೃಢಪಟ್ಟಿರುತ್ತದೆ. ಈ ರೀತ್ಯಾ ಆರೋಪಿತರಾದ ನೀವುಗಳು **1963** ನೇ ಕರ್ನಾಟಕ ಅರಣ್ಯ ಕಾಯ್ದೆ ಕಲಂ **62, 80** ಮತ್ತು **104(**ಎ**)** ಹಾಗೂ **1969** ನೇ ಕರ್ನಾಟಕ ಅರಣ್ಯ ನಿಯಮ **127(**ಎ**), 144** ಮತ್ತು **165** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

ಸದರಿ ಮೇಲ್ಕಂಡ ಆರೋಪಗಳನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಮಾಡಿದ್ದರಿಂದ, ಅವುಗಳು ಈ ನ್ಯಾಯಾಲಯದಿಂದ ವಿಚಾರಣೆಯಾಗತಕ್ಕದೆಂದು ಆದೇಶಿಸಲಾಗಿದೆ.

ಪ್ರಃ 1. ಈಗ ಮೇಲೆ ಓದಿ ಹೇಳಿದ ದೋಷಾರೋಪಣೆಯನ್ನು ಕೇಳಿದ್ದೀರಾ? ಅವುಗಳು ನಿಮಗೆ ಅರ್ಥವಾಯಿತೇ?

1 ನೇ ಆರೋಪಿಯ ಉತ್ತರಃ

2 ನೇ ಆರೋಪಿಯ ಉತ್ತರಃ

ಪ್ರಃ 2. ನೀವು ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ***?***

1 ನೇ ಆರೋಪಿಯ ಉತ್ತರಃ

2 ನೇ ಆರೋಪಿಯ ಉತ್ತರಃ

***(***ಆರೋಪಿತರಿಗೆ ದಿನಾಂಕ 21.01.2025 ರಂದು ದೋಷಾರೋಪಣೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ***,*** ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು***.*** ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣೀಕರಿಸುತ್ತೇನೆ***).***

**Sd/-**

ಮೂಡಿಗೆರೆ
ದಿನಾಂಕಃ 21.01.2025

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಮೂಡಿಗೆರೆ.